ವಿಷಯ: **2003-04**ರಲ್ಲಿ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಗೆ ಅನುದಾನ

3352 (2992) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-03ನೇ ಸಾಲಿನಲ್ಲಿ ಶಾಸಕರುಗಳಿಗೆ ಕ್ಷೇತ್ರಾಭಿವೃದ್ಧಿ ನಿಧಿಗೆ ಮೊಸಲಾಗಿಟ್ಟಿರುವ ಅನುದಾನ ಎಷ್ಟು?

ಇಲ್ಲಿಯವರೆಗೆ ಪ್ರತಿಯೊಬ್ಬ ಶಾಸಕರಿಗೆ ಬಿಡುಗಡೆ ಮಾಡಿರುವ ಹಣವೆಷ್ಟು?

ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಆ) 2003-04ನೇ ಸಾಲಿನ ಶಾಸಕರ ಕ್ಷೇತ್ರಭಿವೃದ್ಧಿ ನಿಧಿಗೆ ಅನುದಾನವನ್ನು ಮೊಸಲಾಗಿರಿಸಿದೆಯೇ? ಇದ್ದಲ್ಲಿ ಅದರ ವಿವರಗಳೇನು?

ಶ್ರೀ ಆರ್.ಬಿ. ತಿಮ್ಮಾಪುರ (ಯೋಜನಾ ಸಚಿವರು):

ಅ) ಶಾಸಕರ ಒಟ್ಟು 120 ಕೋಟಿ ಈ ನಿಧಿಯಿಂದ 31-10ಕೋಟಿ ವಿವರಗಳು ಈ ಕೆಳಗಿನಂತಿವೆ ತಲಾ ರೂ 10 ಲಕ್ಷಗಳಂತೆ

ಅ) 224 ವಿಧಾನ ಸಭೆ ಶಾಸಕರಿಗೆ	22.40 ಕೋಟಿ
ಆ) ಒಬ್ಬ ನಾಮ ನಿರ್ದೇಶನ ಶಾಸಕರು	0.10 ಕೋಟಿ
ಇ) 75ವಿಧಾನ ಪರಿಷತ್ ಶಾಸಕರು	7.50 ಕೋಟಿ
ಈ) 6 ನಿವೃತ್ತ ವಿಧಾನ ಪರಿಷತ್ ಸದಸ್ಯರು	0.60 ಕೋಟಿ
ಉ) 5 ಚಾಮರಾಜನಗರ ಜಿಲ್ಲೆಯ ವಿಧಾನ ಸಭಾ ಸದಸ್ಯರು (ಎರಡನೇ ಕಂತು)	0.50 ಕೋಟಿ
ಒಟ್ಟು	31.10 ಕೋಟಿ

2002-03ನೇ ಆರ್ಥಿಕ ವರ್ಷ ಮುಕ್ತಾಯಗೊಂಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಹೌದು ಪ್ರತಿ ಶಾಸಕರಿಗೆ ತಲಾ 40 ಲಕ್ಷಗಳಂತೆ 300 ಶಾಸಕರಿಗೆ ಒಟ್ಟು 120ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

ನ್ಯಾಯಾಲಯಗಳಿಗೆ ಅನುದಾನ

3384 (3995) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಧೀನ ಜಿಲ್ಲಾ ನ್ಯಾಯಾಲಯಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ವಿವರ ನೀಡುವುದು)

ಆ) ಕಳೆದ ಮೂರು ಸಾಲಿನ ಆಯವ್ಯಯದಲ್ಲಿ ನ್ಯಾಯಾಲಯಗಳಿಗೆ ನಿಗದಿ ಮಾಡಿದ ಅನುದಾನ ಎಷ್ಟು? ಬಿಡುಗಡೆ ಮಾಡಿದ ಹಣ ಎಷ್ಟು?

ಇ) ಈ ಅನುದಾನದಲ್ಲಿ ಕೋರ್ಟಿಗೆ ಬರುವ ಕಕ್ಷಿದಾರರು, ಪೋಲೀಸರು, ವಕೀಲರು, ಸಾಕ್ಷಿದಾರರ ಅನುಕೂಲಕ್ಕಾಗಿ ಕೋರ್ಟಿನ ಆವರಣದಲ್ಲಿ ಕೊಠಡಿ, ಪೀಠೋಪಕರಣ, ಶೌಚಾಲಯ, ಕುಡಿಯುವ ನೀರು ಇತ್ಯಾದಿಗಳಿಗೆ ವಿನಿಯೋಗಿಸಿದ ಹಣ ಎಷ್ಟು (ಜಿಲ್ಲಾವಾರು ವಿವರ ನೀಡುವುದು ಮತ್ತು ಶಿವಮೊಗ್ಗ ಜಿಲ್ಲೆಯ ಕೋರ್ಟುವಾರು ವಿವರ ನೀಡುವುದು)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) 1) ಜಿಲ್ಲಾ ನ್ಯಾಯಾಲಯಗಳು –94

2) ಲೇಬರ್ ಕೋರ್ಟ್ ಮತ್ತು ಇಂಡಸ್ಟ್ರೀಯಲ್ ಟ್ರಿಬ್ಯುನಲ್ಸ್ –16

3) ಕುಟುಂಬ ನ್ಯಾಯಾಲಯಗಳು –10

ಒಟ್ಟು 120

(ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಿದೆ)

ಆ)

ಸಾಲು	ಒದಗಿಸಿದ ಅನುದಾನ (ಲಕ್ಷ ರೂಗಳಲ್ಲಿ)	ಬಿಡುಗಡೆ
2000–02	220.82	1555.51
2001–02	2270.52	1202.61
2002–03	1788.62	953.96

ಇ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ನ್ಯಾಯಾಲಯಗಳ ಕಟ್ಟಡ ವಗೈರೆಗಳಿಗೆ ವ್ಯಯಿಸಲಾದ ಮೊತ್ತ (ಜಿಲ್ಲಾವಾರು) ಲಕ್ಷ ರೂಗಳಲ್ಲಿ

ಕೋಲಾರ	0.96
ಮೈಸೂರು	2.80
ಚಾಮರಾಜನಗರ	3.60
ಮಂಡ್ಯ	7.00
ಬೆಂಗಳೂರು	1.30
ಹಾಸನ	21.37
ಚಿಕ್ಕಮಗಳೂರು	–
ಶಿವಮೊಗ್ಗ	6.48
ಚಿತ್ರದುರ್ಗ	–
ದಾವಣಗೆರೆ	–
ತುಮಕೂರು	–
ಬೆಂಗಳೂರು	–
ಮಂಗಳೂರು	–
ಉಡುಪಿ	–
ಮಡಿಕೇರಿ	–
ಬೆಳಗಾಂ	110.31
ಬಾಗಲಕೋಟೆ	44.96
ಬಿಜಾಪುರ	2.78
ಕಾರವಾರ	32.40

ಧಾರವಾಡ	48.27
ಹಾವೇರಿ	3.77
ಗದಗ	40.27
ರಾಯಚೂರು	2.47
ಬಳ್ಳಾರಿ	37.91
ಬೀದರ್	12.77
ಗುಲ್ಬರ್ಗ	10.50

ಶಿವಮೊಗ್ಗ ಜಿಲ್ಲೆಯ ಕೋರ್ಟ್‌ವಾರು ವ್ಯಯಿಸಲಾಸ ಮೊತ್ತ
(ಲಕ್ಷರೂಗಳಲ್ಲಿ)

1)	ಶಿವಮೊಗ್ಗ ನ್ಯಾಯಾಲಯ ಕಟ್ಟಡ	ರೂ.0.80
2)	ಭದ್ರಾವತಿ ನ್ಯಾಯಾಲಯ ಕಟ್ಟಡ	ರೂ.0.18
3)	ಸಾಗರ ನ್ಯಾಯಾಲಯ ಕಟ್ಟಡ	ರೂ.1.82
4)	ಶಿಕಾರಿಪುರ –"–	ರೂ.1.38
5)	ತೀರ್ಥಹಳ್ಳಿ –"–	ರೂ.–
6)	ಸೊರಬ ಮತ್ತು ಹೊಸದುರ್ಗ	ಖಾಸಗಿ ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸಲಾಗುತ್ತಿದೆ.

ಉತ್ತರ ಕರ್ನಾಟಕ ಅಭಿವೃದ್ಧಿ

3414 (3543) :-ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ (ಹುಬ್ಬಳ್ಳಿ) ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಅಭಿವೃದ್ಧಿಗಾಗಿ ಹೊಸದಾಗಿ ನಿರ್ಮಿಸಿರುವ ಅಬಿವೃದ್ಧಿ ಆಯುಕ್ತರ ಕಛೇರಿ ಅಸ್ತಿತ್ವಕ್ಕೆ ಬಂದಿದೆಯೆ; ಅದರ ರೂಪರೇಷಗಳೇನು;

ಆ) ಪ್ರತಿಯೊಂದು ಇಲಾಖೆಯ ಅಭಿವೃದ್ಧಿ ಕೆಲಸಕ್ಕಾಗಿ ಸರ್ಕಾರೇತರ ಸಮಿತಿ ರಚಿಸುವ ವಿಚಾರ ಸರ್ಕಾರ ಪರಿಶೀಲನೆಯಲ್ಲಿದೆಯೇ; ಇದ್ದಲ್ಲಿ ಸಮಿತಿಯಲ್ಲಿ ಯಾರು ಇರಬೇಕೆಂಬ ನಿಯಮ ರಚಿಸಲಾಗಿದೆ; (ಮಾಹಿತಿ ಒದಗಿಸುವುದು)

ಶ್ರೀ ಆರ್.ಬಿ. ತಿಮ್ಮಾಪುರ್ (ಯೋಜನಾ ಸಚಿವರು):

ಅ) ಹೌದು

ರೂಪರೇಷೆಗಳು ಈ ಕೆಳಗಿನಂತಿದೆ.

1) ಉತ್ತರ ಕರ್ನಾಟಕ ಪ್ರದೇಶಾಭಿವೃದ್ಧಿಗೆ ಕೇಂದ್ರೀಕೃತ ಮಾರ್ಗಸೂತ್ರಗಳನ್ನು ಒದಗಿಸುವುದು

2) ಉತ್ತರ ಕರ್ನಾಟಕ ಎಲ್ಲಾ ಅಭಿವೃದ್ಧಿ ಚಟುವಟಿಕೆಗಳನ್ನು ಸೂಕ್ತ ರೀತಿಯಲ್ಲಿ ಸಮನ್ವಯಗೊಸುವುದು.

3) ಉತ್ತರ ಕರ್ನಾಟಕ ಎಲ್ಲಾ ಅಚ್ಚುಕಟ್ಟು ಪ್ರಾಧಿಕಾರಗಳ ಮತ್ತು ಪ್ರದೇಶಾಭಿವೃದ್ಧಿ ಮಂಡಳಿಗಳ ಅಭಿವೃದ್ಧಿ ಚಟುವಟಿಕೆಗಳ ಉಸ್ತುವಾರಿ.

4) ಈ ಪ್ರದೇಶದಲ್ಲಿ ಉದ್ಭವಿಸತಕ್ಕ ಸಮಸ್ಯೆಗಳ ಬಗ್ಗೆ ಸರ್ಕಾರದೊಂದಿಗೆ ಸಮಾಲೋಚನೆ ಮತ್ತು ಸರ್ಕಾರಕ್ಕೆ ಸಂಭವನೀಯ ಪರಿಹಾರಗಳನ್ನು ಸೂಚಿಸುವುದು.

ಆ) ಇಲ್ಲ

ಉದ್ಭವಿಸುವುದಿಲ್ಲ